# ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ ಚನ್ನರಾಯಪಟ್ಟಣ

ಸಿ.ಸಿ. 1485/2024

ಪ್ರಮಾಣ ವಚನ ಬೋಧಿಸಲಾಯಿತು

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ | ಮಮತ | ಚಾಸಾ- 1 |
| ಗಂಡನ **ಹೆಸರು** | ಃ | ರುದ್ರಮೂರ್ತಿ | ಪ್ರಾಸಾ- 1 |
| **ವಯಸ್ಸು** | ಃ | 39 ವರ್ಷ | |
| **ಉದ್ಯೋಗ** | ಃ | ವ್ಯವಸಾಯ | |
| **ವಾಸ** | | ಪೋತನಹಳ್ಳಿ | ದಿನಾಂಕಃ 28.11.2025 |

**ಮುಖ್ಯ ವಿಚಾರಣೆ ಃ- ಎ.ಪಿ.ಪಿ. ಯವರಿಂದ**

ಆರೋಪಿ ಗೊತ್ತು. ಚಾಸಾ-**2** ರಿಂದ **5** ಗೊತ್ತು. ದಿಃ **16.08.2024** ರಂದು ಸಂಜೆ **6.00** ರಿಂದ **6.30** ರ ಸಮಯದಲ್ಲಿ ನಮ್ಮ ಮನೆಯ ಬಳಿ ಚಾಸಾ-**2** ರವರು ಬಂದು ಹೋಗುತ್ತಿದ್ದು, ಆಗ ಆರೋಪಿಯು ಚಾಸಾ-**2**ರವರಿಗೆ ಹೊಡೆದಿದ್ದು ಅದನ್ನು ಕೇಳಲು ನನ್ನ ಗಂಡ ಹೋಗಿದ್ದು ಆಗ ನೀನು ಕೇಳಲು ಬಂದಿದ್ದಯಾ ಎಂದು ಕೈ ಮುಷ್ಟಿಯಿಂದ ನನ್ನ ಗಂಡನ ಎದೆಗೆ ಹೊಡೆದಿದ್ದು ಅವರು ಸ್ಥಳದಲ್ಲಿ ಬಿದಿದ್ದು ಅವರು ಅಲ್ಲೇ ಮರಣ ಹೊಂದಿರುತ್ತಾರೆ. ನಂತರ ಅವರನ್ನು ಸರ್ಕಾರಿ ಚನ್ನರಾಯಪಟ್ಟಣ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು ಅಲ್ಲಿನ ವೈದ್ಯರು ಪರೀಕ್ಷೆ ಮಾಡಿ ಈಗಾಗಲೇ ಮರಣ ಹೊಂದಿದ್ದಾರೆ ಎಂದು ಹೇಳಿದರು. ದೂರನ್ನು ಅದೇ ದಿನ ರಾತ್ರಿ ನೀಡಿರುತ್ತೇನೆ. ನಾನು ಮರುಹೇಳಿಕೆಯನ್ನು ಪೊಲೀಸ್ ರವರಿಗೆ ನೀಡಿರುವುದಿಲ್ಲ. ಸಾಕ್ಷಿಯ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-**1** ಎಂದು ಹಾಗೂ ಸಹಿಯನ್ನು ನಿಪಿ-**1**(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು** ಭಾಗಶಃ **ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ನುರಿತ ಎಪಿಪಿ ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ.** ದಾಖಲೆಗಳನ್ನು ಪರಿಶೀಲಿಸಿ **ಸಾಕ್ಷಿಯನ್ನು** ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ **ಪಾಟೀ ಸವಾಲು ಮಾಡಲು ಅನುಮತಿ**ಸಲಾಯಿತು)

**ಪಾಟೀ ಸವಾಲು ಃ-** ಶ್ರೀಮತಿ ಎ.ಪಿ.ಪಿ ರವರಿಂದ

ಆ ದಿನ ಸಂಜೆ **6.30** ಕ್ಕೆ ನಾನು ಮತ್ತು ನನ್ನ ಗಂಡ ಮನೆಯ ಬಳಿ ಇದ್ದಾಗ, ಮನೆಯ ಸ್ವಲ್ಪ ದೂರದಲ್ಲಿ

ಚಾಸಾ-**2**ರವರು ಕೂಗಿಕೊಂಡಿದ್ದು ಕೇಳಿಸಿರುತ್ತದೆ ಎಂದರೆ ಸರಿ. ಆಗ ನಾನು ಮತ್ತು ನನ್ನ ಗಂಡ ಸ್ಥಳಕ್ಕೆ ಹೋಗಿ ನೋಡಿದ್ದು ಆಗ ಚಾಸಾ-**3** ರವರು ಅಲ್ಲೇ ಇದ್ದರು ಎಂದರೆ ಸರಿ. ಆರೋಪಿಯು ಒಂದು ದೊಣ್ಣೆಯಿಂದ ಚಾಸಾ-**3**ರವರಿಗೆ ಹೊಡೆದರು ಎಂದರೆ ಸರಿ. ಆಗ ನಾನು ಮತ್ತು ನನ್ನ ಗಂಡ ಬಿಡಿಸಲು ಹೋದಾಗ ನನ್ನ ಗಂಡನಿಗೆ ಮುಷ್ಟಿಯಿಂದ ಎದೆಗೆ ಹೊಡೆದು ಕೆಳಗೆ ಕೆಡವಿ ಕಾಲಿನಿಂದ ತುಳಿದಿರುತ್ತಾರೆ ಎಂದರೆ ಸರಿ. ಆಗ ಚಾಸಾ-**4** ಮತ್ತು ನಾನು ಜಗಳ ಬಿಡಿಸಿ ಸಮಾಧನ ಪಡಿಸಿದೇವು ಎಂದರೆ ಸರಿ. ಆಗ ನನ್ನ ಗಂಡನಿಗೆ ಪ್ರಜ್ಞೆ ತಪ್ಪಿದ್ದು ಯಾವುದೋ ಒಂದು ಆಟೋದಲ್ಲಿ ಅವರನ್ನು ಚಾಸಾ-**5** ರವರ ಜೊತೆ ಚನ್ನರಾಯಪಟ್ಟಣ ನಾಗೇಶ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ ಎಂದರೆ ಸಾಕ್ಷಿಯು ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ ಎಂದು ಹೇಳಿದರು. ನಂತರ ಅದೇ ದಿನ ನಾಗೇಶ್ ಆಸ್ಪತ್ರೆಯಿಂದ, ಚನ್ನರಾಯಪಟ್ಟಣ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ ಎಂದರೆ ಸಾಕ್ಷಿಯು ಅಲ್ಲಿ ವೈದ್ಯರು ಇಲ್ಲದ ಕಾರಣ ಸರ್ಕಾರಿ ಆಸ್ಪತ್ರೆಗೆ ಬಂದಿರುತ್ತೇವೆ ಎಂದು ಹೇಳಿದರು. ಆಸ್ಪತ್ರೆಯ ವೈದ್ಯರು ನನ್ನ ಗಂಡನನ್ನು ಪರೀಕ್ಷೆ ಮಾಡಿ ಮರಣ ಹೊಂದಿದ್ದಾರೆ ಎಂದು ಹೇಳಿದ್ದು ಶವವನ್ನು ಶವಗಾರಕ್ಕೆ ಹಾಕಿರುತ್ತೇವೆ ಎಂದರೆ ಸರಿ. ಈ ರೀತಿಯಾಗಿ ನಾನು ದೂರು ನೀಡಿರುತ್ತೇನೆ ಎಂದರೆ ಸರಿ.

ದಿಃ **14.11.2024** ರಂದು ನನ್ನ ಮರುಹೇಳಿಕೆಯಲ್ಲಿ ಆರೋಪಿ ಹಾಗೂ ಚಾಸಾ-**3** ರವರು ಕೈನಿಂದ ತಳ್ಳಾಡಿ ನೂಕಾಡುತ್ತಿದ್ದಾಗ ನಾನು ಮತ್ತು ನನ್ನ ಗಂಡ ಹೋಗುತ್ತಿದ್ದಾಗ ನನ್ನ ಗಂಡ ಸ್ಥಳದಲ್ಲಿ ಇದ್ದ ತೆಂಗಿನ ಕಾಯಿ ಮಟ್ಟೆ ಮೇಲೆ ಬಿದ್ದರು ಎಂದರೆ ಸರಿ. ಆಗ ನನ್ನ ಗಂಡ ಮೇಲೆ ಎದ್ದೇಳಲಿಲ್ಲ ಎಂದರೆ ಸರಿ. ಆಗ ಆರೋಪಿಯು ಕೈನಿಂದ ನನ್ನ ಗಂಡನಿಗೆ ಹೊಡೆಯಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಈ ಮೊದಲು ಹೃದಯ ಸಂಬಂಧ ಖಾಯಿಲೆ ಇದ್ದು ಅವರಿಗೆ ಸ್ಟಂಟ್ ನ್ನು ಹಾಕಿದ್ದರು ಎಂದರೆ ಸರಿ. ಅದರಿಂದ ನನ್ನ ಗಂಡನಿಗೆ ಸ್ಥಳದಲ್ಲಿ ಹೃದಯಘಾತವಾಗಿ ಅಲ್ಲಿಯೇ ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲಗಳೆದ ಹೇಳಿಕೆಯ ಭಾಗವನ್ನು ನಿಪಿ-**2** ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿಯ ಪರ ವಕೀಲರು ಪಾಟೀಸವಾಲು ಮಾಡಲು ಸಮಯ ಕೇಳಿದ್ದರಿಂದ ಮುಂದೂಡಲಾಯಿತು.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ.ಸ.ಇ.ಎ.ಒ.,**

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ